**ಕಾಲೇಜಿನಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ನೀತಿ ನಿಯಮಗಳು**

**ವಿದ್ಯಾರ್ಥಿಗಳು ಮಾಡತಕ್ಕದ್ದು**

- ಎಲ್ಲಾ ವಿದ್ಯಾರ್ಥಿಗಳು ಕಾಲೇಜು ಸೂಚಿಸಿರುವ ನಿಯಮಗಳಿಗೆ ಅನುಸಾರವಾದ ಸಮವಸ್ತ್ರವನ್ನು ನಿಗದಿತ ದಿನಗಳಲ್ಲಿ (ವಿಶೇಷ ತರಗತಿಗಳು, ಕೋಚಿಂಗ್ ತರಗತಿಗಳು, ಪರೀಕ್ಷಾ ಸಮಯ, ಕಾಲೇಜು ನಡೆಸುವ ಸಭೆ ಸಮಾರಂಭಗಳು) ಧರಿಸಬೇಕು.
- ಕಾಲೇಜು ನೀಡಿದ ಗುರುತು ಪತ್ರ (ID Card) ವನ್ನು ಸರಿಯಾದ ರೀತಿಯಲ್ಲಿ ಕಾಣುವಂತೆ ವಿದ್ಯಾರ್ಥಿಗಳು ಯಾವಾಗಲೂ ಧರಿಸಬೇಕು.
- ತರಗತಿಗಳಿಗೆ ಕ್ಲಪ್ತ ಸಮಯದಲ್ಲಿ ಯಾವಾಗಲೂ ಹಾಜರಾಗಬೇಕು.
- ಪ್ರತಿದಿನ ಬೆಳಗ್ಗೆ ಪ್ರಾರ್ಥನೆ ನಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಶಾಂತಚಿತ್ತದಿಂದ, ಶಿಸ್ತಿನಿಂದ, ಸಾವಧಾನವಾಗಿ ಕಡ್ಡಾಯವಾಗಿ ನಿಂತಿರುವುದು.
- ಸ್ಟಡಿಬೆಲ್ ಆದ ತಕ್ಷಣ ವಿದ್ಯಾರ್ಥಿಗಳು ಕಡ್ಡಾಯವಾಗಿ ತರಗತಿ ಒಳಗೆ ಹೋಗಬೇಕು.
- ಕಾಲೇಜು ಆವರಣದಲ್ಲಿ ಕನ್ನಡ/ಇಂಗ್ಲೀಷ್ ಮಾತನಾಡತಕ್ಕದ್ದು.
- ಕಾಲೇಜು ನಡೆಸುವ ಆಂತರಿಕ, ಮಧ್ಯಾವಧಿ, ಪೂರ್ವಸಿದ್ಧತಾ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವುದು.
- ಇತರ ವಿದ್ಯಾರ್ಥಿಗಳೊಂದಿಗೆ, ಆಫೀಸು ಸಿಬ್ಬಂದಿಗಳೊಂದಿಗೆ ಹಾಗೂ ಪ್ರಾಧ್ಯಾಪಕರೊಂದಿಗೆ ನಯವಿನಯದಿಂದ ವರ್ತಿಸಬೇಕು.
- ಕಾಲೇಜು ಬಿಡುವು (ತರಗತಿ ನಡೆಯದ) ಸಮಯದಲ್ಲಿ ವಿದ್ಯಾರ್ಥಿಗಳು ಲೈಬ್ರೆರಿ, ಅಥವಾ ವಿದ್ಯಾರ್ಥಿನಿಯರು – ವಿದ್ಯಾರ್ಥಿನಿಯರ ವಿಶ್ರಾಂತಿ ಕೊಠಡಿ, ವಿದ್ಯಾರ್ಥಿಗಳು–ವಿದ್ಯಾರ್ಥಿ ವಿಶ್ರಾಂತಿ ಕೊಠಡಿಯಲ್ಲಿ ಶಾಂತವಾಗಿ ಇರುವುದು. ಅನಗತ್ಯವಾಗಿ ಕಾಲೇಜು ಆವರಣದಲ್ಲಿ ಓಡಾಡಬಾರದು.
- ಅನಿವಾರ್ಯವಾಗಿ ತರಗತಿಗಳಿಗೆ ಗೈರು ಹಾಜರಾಗುವ ಸಂದರ್ಭದಲ್ಲಿ ಪ್ರಾಂಶುಪಾಲರ ಅಥವಾ ತರಗತಿ ಮೆಂಟರ್‌ಗಳ ಅನುಮತಿಯನ್ನು ಪಡೆಯಬೇಕು.
- ಕ್ಯಾಲೆಂಡರ್‌ನಲ್ಲಿ ನಿಗದಿಪಡಿಸಿದ ಪುಟದಲ್ಲಿ ಗೈರುಹಾಜರಾದ ಬಗ್ಗೆ ವಿವರಗಳನ್ನು ಭರ್ತಿ ಮಾಡಿ ಹೆತ್ತವರ/ವಾರ್ಡನ್‌ಗಳ ಸಹಿ ಪಡೆದು ಸಂಬಂಧಪಟ್ಟ ಅಧ್ಯಾಪಕರಿಗೆ ತೋರಿಸಿ ಮುಂದಿನ ತರಗತಿಗಳಿಗೆ ಹಾಜರಾಗಬೇಕು.
- ಪಠ್ಯೇತರ ಚಟುವಟಿಕೆಗಳಲ್ಲಿ (NCC, NSS,Sports, Culutural events etc.) ಭಾಗವಹಿಸುವ ವಿದ್ಯಾರ್ಥಿಗಳಿಗೆ ಎಟೆಂಡೆನ್ಸ್ ಕ್ರೆಡಿಟ್‌ನ್ನು ನೀಡಲಾಗುತ್ತದೆ. ಅದನ್ನು ಸಂಬಂಧಪಟ್ಟ ಪ್ರಾಧ್ಯಾಪಕರಿಂದ ಪಡೆದುಕೊಳ್ಳಬೇಕು.
- ಶೈಕ್ಷಣಿಕ ವರ್ಷ ಪೂರ್ತಿಗೊಂಡಾಗ ಶೇಕಡಾ 75ರಷ್ಟು ಹಾಜರಾತಿಯನ್ನು ಪ್ರತಿಯೊಂದು ವಿಷಯದಲ್ಲೂ ಕಡ್ಡಾಯವಾಗಿ ಹೊಂದಿರಬೇಕು.
- ತರಗತಿ ಮತ್ತು ಪ್ರಯೋಗಾಲಯಗಳಿಗೆ' ವಿದ್ಯಾರ್ಥಿಗಳು ಉಪನ್ಯಾಸಕರ ಅನುಮತಿ ಇಲ್ಲದೆ ಒಳಪ್ರವೇಶಿಸುವಂತಿಲ್ಲ ಹಾಗೂ ಹೊರ ಹೋಗುವಂತಿಲ್ಲ.
- ವಿದ್ಯಾರ್ಥಿಯು ನೋಟ್ಸ್/ರೆಕಾರ್ಡ್/ಪ್ರಗತಿಪತ್ರಕ್ಕೆ ಉಪನ್ಯಾಸಕರ/ಹೆತ್ತವರ ನಕಲು ಸಹಿ ಮಾಡಿದಲ್ಲಿ ವಿಶೇಷ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
- ಪ್ರಥಮ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ/ದ್ವಿತೀಯ ಪಿಯುಸಿಯಲ್ಲಿ ಕಡಿಮೆ ಅಂಕ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಸ್ಲೋಲರ್ನರ್/ ರೆಮೆಡಿಯಲ್ ತರಗತಿಗಳು/ಪರೀಕ್ಷೆಗಳು ನಡೆಯುತ್ತಿರುತ್ತವೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಾಗತಕ್ಕದ್ದು.

- ಕರ ಪತ್ರ ಅಥವಾ ಬೇಡಿಕೆಗೆ ಸಂಬಂಧ ಪಟ್ಟಂತಹ ಅರ್ಜಿಯನ್ನು ಪ್ರಾಂಶುಪಾಲರ ಅನುಮತಿ ಇಲ್ಲದೆ ಕಾಲೇಜಿನ ಆವರಣದಲ್ಲಿ ಪ್ರಚಾರ ಮಾಡುವಂತಿಲ್ಲ.
- ವಿದ್ಯಾರ್ಥಿಗಳು ಸರ್ಕಾರದ ಅಥವಾ ಆಡಳಿತ ಮಂಡಳಿಯ ಯಾವುದೇ ಅಧಿಕಾರಿಗಳ ವಿರುದ್ಧ ರಾಜಕೀಯ ಆಂದೋಲನ ನಡೆಸುವಂತಿಲ್ಲ.
- ವಿದ್ಯಾರ್ಥಿಗಳು ಕಾಲೇಜಿನ ಹೊರಗಿನ ಯಾವುದೇ ಸಂಘಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದುವಂತಿಲ್ಲ.
- ವಿದ್ಯಾರ್ಥಿಗಳು ಕಾಲೇಜಿಗೆ ಸಂಬಂಧ ಪಡದ ಯಾವುದೇ ತಂಡವನ್ನು ಪ್ರಾಂಶುಪಾಲರ ಅನುಮತಿ ಇಲ್ಲದೆ ಪ್ರತಿನಿಧಿಸುವಂತಿಲ್ಲ.
- ಸಾಮಾಜಿಕ ಜಾಲತಾಣದಲ್ಲಿ ಕಾಲೇಜು ಕುರಿತು ಅವಹೇಳನಕಾರಿ ವಿಚಾರ ಬರೆಯುವುದು, ವೀಡಿಯೋ ಹಾಕುವುದು ಕಡ್ಡಾಯವಾಗಿ ನಿಷೇಧಿಸಲಾಗಿದೆ.
- ವಿದ್ಯಾರ್ಥಿಗಳು ಯಾವುದೇ ರೀತಿಯ ಗುಂಪುಗಾರಿಕೆ, ಹಕ್ಕೊತ್ತಾಯ ಅಥವಾ ಪ್ರತಿಭಟನೆ (ಪ್ರದರ್ಶನ) ಗಳನ್ನು ನಡೆಸುವಂತಿಲ್ಲ.
- ರ್‍ಯಾಗಿಂಗ್ ಅಥವಾ ಕಿರಿಯ/ಇತರ ವಿದ್ಯಾರ್ಥಿಗಳ ಮಾನಸಿಕತೆಯನ್ನು ಕುಗ್ಗಿಸುವ ಚಟುವಟಿಕೆಗಳನ್ನು ನಡೆಸಬಾರದು.
- ಅಂತಸ್ತಿನ ಮೆಟ್ಟಿಲುಗಳಲ್ಲಿ, ತಿರುವುಗಳಲ್ಲಿ, ಗುಂಪುಗೂಡಿ ಇತರರಿಗೆ ತೊಂದರೆಯನ್ನುಂಟು ಮಾಡಬಾರದು ಹಾಗೂ ಗುಂಪುಗೂಡಿ ಮಾತನಾಡಬಾರದು.
- ವಿದ್ಯಾರ್ಥಿಗಳು ಹಣ ಸಂಗ್ರಹಿಸುವುದು, ಸಭೆ ನಡೆಸುವುದು, ಹಬ್ಬಗಳನ್ನು, ಜನ್ಮ ದಿನವನ್ನು ಆಚರಿಸುವಂತಿಲ್ಲ.
- ತರಗತಿಗಳಲ್ಲಿ, ಸಭಾಭವನಗಳಲ್ಲಿ ಅಥವಾ ಕಾಲೇಜು ಸಮಾರಂಭಗಳಲ್ಲಿ, ಯಾವುದೇ ರೀತಿಯ ಅಸಭ್ಯ ವರ್ತನೆ ತೋರಿಸಬಾರದು.
- ವಿದ್ಯಾರ್ಥಿಗಳು ಯಾವುದೇ ಪ್ರವಾಸ, ಪ್ರಯಾಣ, ಪಿಕ್‌ನಿಕ್ ಆಯೋಜಿಸುವಂತಿಲ್ಲ.
- ತರಗತಿಗಳಿಗೆ ಹಾಜರಾಗದೆ ಸೈಬರ್, ಪೇಟೆ, ಅಥವಾ ಚಿತ್ರಮಂದಿರಗಳಲ್ಲಿ ಸಮಯ ಕಳೆಯಬಾರದು.
- ಮದ್ಯಪಾನ, ಇತರ ಮಾದಕ ದ್ರವ್ಯಗಳು, ಬೀಡಿ, ಸಿಗರೇಟ್ ಇತ್ಯಾದಿಗಳನ್ನು ಉಪಯೋಗಿಸಬಾರದು.
- ಓರ್ವ ವಿದ್ಯಾರ್ಥಿಯ ಬಗ್ಗೆ ವಿಚಾರಿಸಲು ಹೆತ್ತವರು/ಪೋಷಕರು/ರಕ್ಷಕರ ಹೊರತಾಗಿ ಇನ್ನಿತರ ವ್ಯಕ್ತಿಗಳು ಬರುವಂತಿಲ್ಲ. ನೇರವಾಗಿ ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಭೇಟಿ ಮಾಡುವಂತಿಲ್ಲ.
- ವಿದ್ಯಾರ್ಥಿಗಳು ದ್ವಿಚಕ್ರ, ನಾಲ್ಕು ಚಕ್ರ, ಯಾವುದೇ ಘನ ವಾಹನಗಳನ್ನು ಕಾಲೇಜು ಆವರಣದೊಳಗೆ ತರುವಂತಿಲ್ಲ.
- ವಿದ್ಯಾರ್ಥಿಗಳು ಕಾಲೇಜಿಗೆ ಪ್ರಯಾಣಿಸುವಾಗ, ಸಾರಿಗೆ ಸಿಬ್ಬಂದಿಯೊಂದಿಗೆ ಯಾವುದೇ ಕಾರಣಕ್ಕೂ ಜಗಳವಾಡುವಂತಿಲ್ಲ, ರಸ್ತೆಯ ಬದಿಯಲ್ಲಿ ವಿದ್ಯಾರ್ಥಿಗಳು ಚಲಿಸಿ ವಾಹನಗಳ ಚಾಲನೆಗೆ ತೊಂದರೆಯುಂಟು ಮಾಡಬಾರದು.
- ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಮೆಸ್‌ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕಾಗಿ ಮೆಸ್ ಬದಲಾವಣೆ ಮಾಡಿದಲ್ಲಿ ತರಗತಿ ಮೆಂಟರ್‌ಗಳ ಗಮನಕ್ಕೆ ತರತಕ್ಕದ್ದು.

- ಮೊಬೈಲ್, ಕ್ಯಾಮರಾ, ಲ್ಯಾಪ್‌ಟಾಪ್, ಅಥವಾ ಇನ್ಯಾವುದೇ ದೃಶ್ಯ ಮತ್ತು ಶ್ರವ್ಯ ಸೌಲಭ್ಯಗಳಿರುವ ಎಲೆಕ್ಟ್ರಾನಿಕ್ ಉಪಕರಣಗಳನ್ನು ಕಾಲೇಜು ಪರಿಸರದಲ್ಲಿ ಅಥವಾ ತರಗತಿಗಳಿಗೆ ತಂದು ಉಪಯೋಗಿಸಬಾರದು. ಈ ಮೇಲಿನ ಉಪಕರಣಗಳು ಕಂಡು ಬಂದಲ್ಲಿ ವಿದ್ಯಾರ್ಥಿಯು ಕಾಲೇಜು ನಿಗದಿಪಡಿಸಿದ ದಂಡ ಪಾವತಿಸಬೇಕು.
- ಕಾಲೇಜಿನ ನಿಯಮ ವಿರುದ್ಧವಾಗಿ ವರ್ತಿಸುವ ವಿದ್ಯಾರ್ಥಿಗಳನ್ನು ಆರಂಭದಲ್ಲಿ ಪೋಷಕರ ಸಮ್ಮುಖದಲ್ಲಿ ವಿಚಾರಣೆ ನಡೆಸಲಾಗುವುದು. ವಿಚಾರಣೆಯಲ್ಲಿ ತಪ್ಪೊಪ್ಪಿಗೆ ಮುಚ್ಚಳಿಕೆ ನೀಡಿದಲ್ಲಿ ಅಥವಾ ನಿರ್ದೋಷಿಯೆಂದು ಸಾಬೀತಾದಲ್ಲಿ ವಿದ್ಯಾರ್ಥಿಯನ್ನು ಮತ್ತೆ ತರಗತಿಗೆ ತೆಗೆದುಕೊಳ್ಳಲಾಗುವುದು.
- ವಿದ್ಯಾರ್ಥಿಯು ಮತ್ತೆ ಅದೇ ನಡವಳಿಕೆಯನ್ನು ಪುನಾರಾವರ್ತಿಸಿದಲ್ಲಿ ಅಂತಹ ವಿದ್ಯಾರ್ಥಿಯ ಪ್ರವೇಶವನ್ನು ಹಿಂಪಡೆಯಲಾಗುವುದು. (dismiss)
- ಕಾಲೇಜಿನ ಡೆಸ್ಕು, ಬೆಂಚು, ಗೋಡೆ, ಶೌಚಾಲಯ, ಇನ್ಯಾವುದೇ ಸ್ಥಳದಲ್ಲಿ ಯಾವುದೇ ಸ್ಟಿಕರ್ ಬರಹಗಳನ್ನು, ಚ್ಯುಯಿಂಗ್ ಗಮ್ ಅಂಟಿಸುವುದು ಅಥವಾ ಬರೆಯುವುದು ನಿಷಿದ್ಧ, ದಂಡನಾ ಶುಲ್ಕ ತೆರಬೇಕಾಗುತ್ತದೆ.
- ತರಗತಿಗಳಲ್ಲಿ ವಿದ್ಯುತ್‌ದೀಪ, ಫ್ಯಾನುಗಳ ಅವಶ್ಯವಿಲ್ಲದ ಸಂದರ್ಭದಲ್ಲಿ ಸ್ವಿಚ್ ಆರಿಸತಕ್ಕದ್ದು.
- ಪೀಠೋಪಕರಣಗಳಿಗೆ, ಲೈಬ್ರೆರಿ ಪುಸ್ತಕಗಳಿಗೆ, ಪ್ರಯೋಗಾಲಯದ ಉಪಕರಣಗಳಿಗೆ ಮತ್ತು ಕಾಲೇಜಿನ ಯಾವುದೇ ವಸ್ತುಗಳಿಗೆ ಹಾನಿಯನ್ನುಂಟುಮಾಡಬಾರದು. ಹಾನಿಯಾದಲ್ಲಿ ದಂಡ ವಿಧಿಸಲಾಗುವುದು.
- ಸ್ವಚ್ಛತೆಯ ದೃಷ್ಟಿಯಿಂದ ಕಾಲೇಜು ಆವರಣ/ ತರಗತಿಯಲ್ಲಿ ಕಸ ಕಂಡುಬಂದಲ್ಲಿ ಕಸದ ಬುಟ್ಟಿಯಲ್ಲಿ ಹಾಕಬೇಕು.
- ಲೈಬ್ರೆರಿ ಅವಧಿಯಲ್ಲಿ ಕಾಲೇಜಿನ ಆವರಣ ಬಿಟ್ಟು ಹೊರ ಹೋಗುವುದಿದ್ದರೆ ಉಪನ್ಯಾಸಕರ / ತರಗತಿ ಮೆಂಟರ್ / ಗ್ರಂಥಪಾಲಕರಲ್ಲಿ ಅನುಮತಿ ಪಡೆಯತಕ್ಕದ್ದು.
- ರತ್ನತ್ರಯ ಸಭಾಂಗಣ ಪ್ರವೇಶಿಸುವಾಗ ವಿದ್ಯಾರ್ಥಿಗಳು ಪಾದರಕ್ಷೆಗಳನ್ನು ಪ್ರವೇಶದ್ವಾರದ ಹೊರಬದಿಯಲ್ಲಿ ಸಾಲಾಗಿ ಇರಿಸತಕ್ಕದ್ದು.

## ವಸ್ತ್ರ ಸಂಹಿತೆ

**ಹುಡುಗರಿಗೆ**

- ✓ ಕಾಲೇಜು ಸೂಚಿಸಿದ ಬಟ್ಟೆಯಲ್ಲಿ ನಿಯಮಾನುಸಾರ ಹೊಲಿಸಿದ ಸಮವಸ್ತ್ರವನ್ನೇ ವಿದ್ಯಾರ್ಥಿಗಳು ಧರಿಸತಕ್ಕದ್ದು. ಸಮವಸ್ತ್ರದ ವಿನ್ಯಾಸದಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು **(alterations)** ಮಾಡುವಂತಿಲ್ಲ. ಕಾಲರ್
- ✓ ಇಲ್ಲದ/ಬರಹಗಳಿರುವ/ ವಿಚಿತ್ರ ಬಣ್ಣದ, ಶರ್ಟ್/ಟೀ ಶರ್ಟ್ ಧರಿಸುವಂತಿಲ್ಲ.
- ✓ ಕಾಲು ಪೂರ್ತಿ ಆವರಿಸುವ ಉದ್ದ ಕಾಲಿನ ಸಾಮಾನ್ಯ ರೀತಿಯ ಪ್ಯಾಂಟ್‌ಗಳನ್ನೇ ಹೊಲಿಸಿ ಧರಿಸಬೇಕು.
- ✓ ತಲೆಕೂದಲುಗಳನ್ನು ಸರಿಯಾದ ರೀತಿಯಲ್ಲಿ ಕತ್ತರಿಸಿ ಓರಣವಾಗಿ ಬಾಚಿ–ಕೊಂಡು ಬರಬೇಕು. ಅತಿಯಾಗಿ ತಲೆಕೂದಲುಗಳನ್ನು / ಗಡ್ಡವನ್ನು ಬೆಳೆಯಲು ಬಿಡಬಾರದು.

**ಹುಡುಗಿಯರಿಗೆ**

- ಕಾಲೇಜು ಸೂಚಿಸಿದ ಬಟ್ಟೆಯಲ್ಲಿ ನಿಯಮಾನುಸಾರ ಹೊಲಿಸಿದ ಸಮವಸ್ತ್ರವನ್ನೇ ವಿದ್ಯಾರ್ಥಿನಿಯರು ಧರಿಸತಕ್ಕದ್ದು. ಸಮವಸ್ತ್ರದ ವಿನ್ಯಾಸದಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು (alterations) ಮಾಡುವಂತಿಲ್ಲ.
- ಪ್ಯಾಂಟ್‌ಗಳು ಕಾಲೇಜು ಸೂಚಿಸಿರುವ ವಿನ್ಯಾಸದ್ದಾಗಿರಬೇಕು. ಜೀನ್ಸ್,Pushup, Sleeveless, Deep neck, long slit ಮತ್ತು leggings ಗಳನ್ನು ಧರಿಸುವಂತಿಲ್ಲ.
- ಮೊಣಕಾಲಿನ ಕೆಳಗಿರುವ ಕುರ್ತಗಳನ್ನೇ ಧರಿಸಬೇಕು.

## ಪರೀಕ್ಷಾ ದಿನ ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು

- ಪ್ರವೇಶಪತ್ರ (ಹಾಲ್ ಟಿಕೇಟ್), ಗುರುತುಚೀಟಿ ಇರುವುದನ್ನು ಖಚಿತಪಡಿಸಿಕೊಳ್ಳಿ. ಪ್ರವೇಶ ಪತ್ರವನ್ನು ಯಾವುದೇ ಕಾರಣಕ್ಕೂ ಲಾಮಿನೇಶನ್ ಮಾಡಬಾರದು.
- ಪೆನ್, ಪೆನ್ಸಿಲ್, ರಬ್ಬರ್, ಶಾರ್ಪನರ್, ಸ್ಕೇಲ್ ಇನ್ನಿತರ ಅಗತ್ಯವಸ್ತುಗಳನ್ನು ತೆಗೆದಿಟ್ಟುಕೊಳ್ಳಿ.
- ಪರೀಕ್ಷೆ ಆರಂಭಕ್ಕೆ ಅರ್ಧಗಂಟೆ ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು.
- ನಿಮ್ಮ ರಿಜಿಸ್ಟರ್ ನಂಬರ್ ಯಾವ ಕೊಠಡಿಯಲ್ಲಿದೆ ಎಂದು ನೋಡಿಕೊಳ್ಳಿ.
- ಮೊಬೈಲ್ ಹಾಗೂ ಕೈಗಡಿಯಾರವನ್ನು ಪರೀಕ್ಷಾ ಕೊಠಡಿಗೆ ಕೊಂಡುಹೋಗಬೇಡಿ.
- Statistic ಹೊರತುಪಡಿಸಿ ಉಳಿದ ಪರೀಕ್ಷೆಗಳಿಗೆ Scientific Calculator
- ತೆಗೆದುಕೊಂಡು ಹೋಗಲು ಅವಕಾಶವಿಲ್ಲ.
- ನಿಮ್ಮ ಜೇಬು, ಪೌಚ್‌ಗಳಲ್ಲಿ ಅನಗತ್ಯವಾದ ಕಾಗದ ತುಣುಕುಗಳಿದ್ದರೆ ಪರೀಕ್ಷಾ ಕೇಂದ್ರ ಪ್ರವೇಶಿಸುವ ಮುನ್ನವೇ ತೆಗೆದುಹಾಕಿಬಿಡಿ.
- ಉತ್ತರ ಪತ್ರಿಕೆ ನೀಡಿದ ತಕ್ಷಣ ಎಲ್ಲಾ ಪುಟಗಳು ಸರಿಯಾಗಿದೆಯೇ ನೋಡಿಕೊಳ್ಳಿ, ಸಮಸ್ಯೆಯಿದ್ದಲ್ಲಿ ತಕ್ಷಣವೇ ಪರೀಕ್ಷಕರ ಗಮನಕ್ಕೆ ತನ್ನಿ.
- ಪೂರ್ವಾಹ್ನ ಗಂಟೆ 10.15ಕ್ಕೆ ಪ್ರಶ್ನೆಪತ್ರಿಕೆಗಳನ್ನು ನೀಡಿದಾಗ ಹತ್ತು ನಿಮಿಷ ಸೂಚನೆಗಳನ್ನು ಮತ್ತು ಪ್ರಶ್ನೆಗಳನ್ನು ಪೂರ್ತಿಯಾಗಿ ಓದಿ.
- ಉತ್ತರ ಪತ್ರಿಕೆಯನ್ನು ನೀಡಿದ ಬಳಿಕ ಅದರಲ್ಲಿ ನಿಮ್ಮ ರಿಜಿಸ್ಟರ್ ನಂಬರ್, ಸಬ್ಜೆಕ್ಟ್ ಮತ್ತು ಸಬ್ಜೆಕ್ಟ್ ಕೋಡ್ ಸರಿಯಾಗಿ ನಮೂದಿಸಿರಿ.
- ಉತ್ತರಿಸುವಾಗ ಆಯಾ ಪ್ರಶ್ನೆಯ ಎದುರಿಗಿರುವ ಕ್ರಮಸಂಖ್ಯೆಯನ್ನೇ ಉತ್ತರ ಪತ್ರಿಕೆಯಲ್ಲಿಯೂ ಬರೆಯಿರಿ.
- ಪರೀಕ್ಷೆ ಮಧ್ಯದಲ್ಲಿ ಕುಡಿಯಲು ನೀರು ಬೇಕೆನಿಸಿದಲ್ಲಿ ಎದ್ದು ನಿಂತು ಪರೀಕ್ಷಕರ ಬಳಿ ಕೇಳಿ.
- ಅಗತ್ಯದ ಯಾವುದೇ ಪ್ರಶ್ನೆಯನ್ನು ಉತ್ತರಿಸದೆ ಹಾಗೆಯೇ ಬಿಡಬೇಡಿ. ನಿಮಗೆ ಗೊತ್ತಿರುವಷ್ಟನ್ನಾದರೂ ಬರೆಯಲು ಪ್ರಯತ್ನಿಸಿ.
- ಪರೀಕ್ಷೆಯ ಕೊನೆಯಲ್ಲಿ ಉತ್ತರವನ್ನು ಮತ್ತು ಪ್ರಶ್ನೆಸಂಖ್ಯೆಗಳನ್ನು ಪರಿಶೀಲಿಸಿ ತಪ್ಪುಗಳಿದ್ದರೆ ಸರಿಪಡಿಸಿ.
- ಮುಗಿದ ಪರೀಕ್ಷೆ ಬಗ್ಗೆ ಚಿಂತೆ ಬೇಡ, ಮುಂದಿನ ಪರೀಕ್ಷೆಗೆ ತಯಾರಿ ನಡೆಸಿ.